# ಇನ್ನೂ ಉಸಿರಾಡುತ್ತಿದೆ ಈ ಸೇತುವೆ!

**ವಾರ್ಕಾಸಿ ಬುಡಕಟ್ಟು ಜನಾಂಗದ ಜನರು ರಬ್ಬರ್ ಮರದ ಬೇರಿನಿಂದ ಕಟ್ಟಿರುವ ಸೇತುವೆ ಅದ್ಭುತವೇ ಸರಿ!**

■ ಚಿತ್ರ– ಲೇಖನ: **ರಾಜು ಎಲ್.ಎಸ್.**



ನಾವು ಆರು ಜನ ಸ್ನೇಹಿತರು ಚಿರಾಪುಂಜಿಗೆ ಭೇಟಿ ನೀಡುವ ನಿರ್ಧಾರಕ್ಕೆ ಬಂದೆವು. ಗುವಾಹಟಿಗೆ ಪ್ರಯಾಣಿಸಲು ವಿಮಾನದ ಟಿಕೆಟ್ ಅನ್ನು ಕಾಯ್ದಿರಿಸಿದೆವು. ಕಡಿಮೆ ಬೆಲೆಯಲ್ಲಿ ಟಿಕೆಟ್ ಸಿಕ್ಕ ಸಂಭ್ರಮ. ಅಂತೂ ಬೆಂಗಳೂರಿನಿಂದ ಗುವಾಹಟಿಗೆ ವಿಮಾನ ಹತ್ತಿದೆವು.

ಗುವಾಹಟಿಯಿಂದ ಮೇಘಾಲಯ ರಾಜ್ಯದ ರಾಜಧಾನಿ ಶಿಲ್ಲಾಂಗ್‌ಗೆ ಅಲ್ಲಿಂದ 54 ಕಿ.ಮೀ. ದೂರದ ಚಿರಾಪುಂಜಿಗೆ ಖಾಸಗಿ ವಾಹನದಲ್ಲಿ ತಲುಪಿದಾಗ ರಾತ್ರಿ 8.30. ಭಾರೀ ಮಳೆ ಮತ್ತು ಚಳಿ. ಬೆಂಗಳೂರಿಗೆ ವಿರುದ್ಧವಾದ ವಾತಾವರಣ.

ಮರುದಿನ ಬೆಳಿಗ್ಗೆ ರೂಮಿನಿಂದ ಹೊರಬಂದು ನೋಡಿದರೆ 'ನಾವೆಲ್ಲಿದ್ದೀವಿ..' ಎನ್ನುವ ಅಚ್ಚರಿ. ಹೊರಗೆ ದಟ್ಟವಾದ ಮೋಡಗಳು ಧರೆಯನ್ನು ಅಪ್ಪಿಹಿಡಿದಂತಿತ್ತು. ನಿರಂತರ ಮಳೆ ಸುರಯುತ್ತಿತ್ತು. ಭೂಲೋಕದ ಪ್ರಾಕೃತಿಕ ಸ್ವರ್ಗ ಚಿರಾಪುಂಜಿ ಎನ್ನುವುದಕ್ಕೆ ಸಾಕ್ಷಿಯಂತಿದ್ದ ದೃಶ್ಯವದು. ಸದಾ ಮೋಡಗಳಿಂದ ಆವರಿಸಿರುವುದರಿಂದ ಈ ಪ್ರದೇಶವನ್ನು



